**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ.**

| | |
|---|---|
| ಸಿ.ಸಿ. ನಂಬರ್ | : 102/2024 |
| ಸಿ.ಡಬ್ಲೂ | : 01 |
| ಪಿ.ಡಬ್ಲೂ | : 01 |
| ಸಾಕ್ಷಿಯ ಹೆಸರು | : ಪದ್ಮಾವತಿ ಹನುಮರಡ್ಡಿ ನೀಲಗುಂದ |
| ವಯಸ್ಸು | : 56 ವರ್ಷ |
| ಉದ್ಯೋಗ | : ಮನೆಗೆಲಸ |
| ವಾಸ ಸ್ಥಳ | : ಕರ್ಲವಾಡ. |

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 05.12.2025.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿರು ನನ್ನ ಸಂಬಂಧಿಕರು. ಚಾಸಾ-4 ನನ್ನ ಮಗ. ಚಾಸಾ-5 ನನ್ನ ತಂಗಿ. ಚಾಸಾ-6 ರವರು ನನ್ನ ಗಂಡ. ಚಾಸಾ-7 ಮತ್ತು 8 ರವರ ಪರಿಚಯ ಇದೆ.

ಈಗ ಅಂದಾಜು 04 ವರ್ಷಗಳ ಹಿಂದೆ ಬೆ.09.00 ಗಂಟೆಗೆ ಕರ್ಲವಾಡ ಗ್ರಾಮದ ನಮ್ಮ ಮನೆಯ ಮುಂದೆ ಆಸ್ತಿ ವಿಷಯಕ್ಕೆ ಹಾಗೂ ಮುಸರಿ ಚೆಲ್ಲುವ ವಿಷಯ ಸಂಬಂಧಿಸಿ ನಮಗೂ ಮತ್ತು ಆರೋಪಿತರಿಗೂ ಬಾಯಿಮಾತಿನ ಜಗಳವಾಗಿರುತ್ತದೆ. ಆದರೆ ಆರೋಪಿ ನನಗೆ ಹೊಡೆ ಬಡೆ ಮಾಡಿಲ್ಲ. ಅವಾಚ್ಯವಾಗಿ ಬೈದಿಲ್ಲ ಹಾಗೂ ಜೀವಬೆದರಿಕೆ ಹಾಕಿರುವುದಿಲ್ಲ. ಬಾಯಿಮಾತಿನ ಜಗಳ ಆದ ಕಾರಣ ನಾನು ಆರೋಪಿಯ ವಿರುದ್ದ ಪೋಲಿಸ ಠಾಣೆಗೆ ದೂರನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ ದೂರನ್ನು **ನಿಪಿ-1** ಎಂದು ಹಾಗೂ ಸಾಕ್ಷಿ ಸಹಿಯನ್ನು **ನಿ.ಪಿ.1(ಎ)** ಎಂದು ಗುರುತಿಸಲಾಯಿತು. ಪ್ರಕರಣಕ್ಕೆ ಸಂಬಂದಿಸಿ ನಾನು ಪೋಲಿಸರಿಗೆ ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ- ಮಾನ್ಯ ಸ.ಸ.ಅ. ರವರಿಂದಃ**

ದಿಃ 10.07.2021 ರಂದು ಬೆ.09.00 ಗಂಟೆಗೆ ನಾನು ನಮ್ಮ ಮನೆಯ ಹಿತ್ತಲಲ್ಲಿ ಮುಸುರಿ ಚೆಲ್ಲಿದ್ದರ ಸಿಟ್ಟಿನಿಂದ ಆರೋಪಿತರು ಅಕ್ರಮಕೂಟವನ್ನು ರಚಿಸಿಕೊಂಡು ಬಂದು 1 ನೇ ಆರೋಪಿ ನನಗೆ ಭೋಸಡಿ ಎಂದು ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿಯಲ್ಲ. ಅದನ್ನು ಪ್ರಶ್ನಿಸಿದ ಚಾಸಾ-4 ರವರಿಗೆ 2 ಮತ್ತು 3 ನೇ ಆರೋಪಿತರು ಹೊಡೆಬಡೆ ಮಾಡಿದ್ದು, 3 ನೇ ಆರೋಪಿ ಬಡಿಗೆಯಿಂದ ಆತನ ದುಬ್ಬಕ್ಕೆ ಹೊಡೆದಿದ್ದು, 2 ನೇ ಆರೋಪಿ ಕೈಯಿಂದ ತನ್ನ ಕಪಾಳಕ್ಕೆ ಹಾಗೂ ತಲೆಗೆ ಹೊಡೆದು ಸಾದಾ ಗಾಯಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಜಗಳ ಬಿಡಿಸಲು ಬಂದ ನನಗೆ ಕೈಹಿಡಿದು ಎಳೆದಾಡಿದ್ದು, 4 ನೇ ಆರೋಪಿ ಕೈಯಿಂದ ಹೊಡೆಬಡೆ ಮಾಡಿ ಕಾಲಿನಿಂದ ಒದ್ದು, ಸಾದಾ ಗಾಯಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಜಗಳ ಬಿಡಿಸಲು ಬಂದ ಚಾಸಾ-5 ರವರಿಗೆ 4 ನೇ ಆರೋಪಿ ನೆಲಕ್ಕೆ ಕೆಡವಿ ಗಾಯ ಪಡಿಸಿ ಜೀವ ಬೆದರಿಕೆ ಹಾಕಿರುತ್ತಾನೆಂದರೆ ಸರಿಯಲ್ಲ. ಈ ಮೇಲಿನಂತೆ ಪೋಲಿಸರಿಗೆ ನಿಪಿ-1 ನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದಕ್ಕೆ ಅನುಗುಣವಾಗಿ ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಲ್ಲಗಳೆದ ಭಾಗವನ್ನು **ನಿಪಿ-2** ಎಂದು ಗುರುತಿಸಲಾಯಿತು. ನಾನು ತೋರಿಸಿದ ಮೇರೆ ಗುನ್ನಾ ಸ್ಥಳದ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ರಾಜಿ ಆದ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ- ಆರೋಪಿತರ ಪರ ಶ್ರೀ ಎನ್ ವಾಯ್ ಎಚ್ ವಕೀಲರಿಂದಃ**

ಏನೂ ಇಲ್ಲ ಎಂದು ಹೇಳಿರುತ್ತಾರೆ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

ನವಲಗುಂದ.